# ಡಿ.ಎಸ್. ವೀರಯ್ಯನವರ ರಾಜಕೀಯ ವಿಚಾರಗಳು

**ಸದಾಶಿವ ಬಿ.*** & **ಕೆ. ಶಾರದಾ****

**DOI: https://doi.org/10.5281/zenodo.19415932**

**ABSTRACT**

ಡಿ.ಎಸ್. ವೀರಯ್ಯನವರ ರಾಜಕೀಯ ನಿಲುವುಗಳು ಅಂಬೇಡ್ಕರ್ ಅವರ ಸಮಾನತೆಯ ಆಶಯಗಳು, ದಲಿತ ಸಂವೇದನೆ ಹಾಗೂ ಎಡಪಂಥೀಯ ಚಿಂತನೆಗಳಿಂದ ರೂಪುಗೊಂಡಿವೆ. ಸತತ 12 ವರ್ಷಗಳ ಕಾಲ ವಿಧಾನಪರಿಷತ್ ಸದಸ್ಯರಾಗಿದ್ದ ಇವರು, ರಾಜಕಾರಣವನ್ನು ಸಮುದಾಯದ ಉದ್ಧಾರ ಮತ್ತು ಜನಸೇವೆಯ ಸಾಧನವನ್ನಾಗಿ ಕಂಡರೇ ವಿನಃ ಕೇವಲ ಅಧಿಕಾರದ ಮೆಟ್ಟಿಲನ್ನಾಗಿಯಲ್ಲ. ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಭ್ರಷ್ಟಾಚಾರ, ಜಾತಿ-ಹಣದ ಪ್ರಭಾವ ಹಾಗೂ ಸಂಸದೀಯ ಕಲಾಪಗಳ ಅಧೋಗತಿಯನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ. ಪ್ರಜಾಪ್ರಭುತ್ವದ ಮೂಲ ಆಶಯಗಳು ಈಡೇರಲು ಹಾಗೂ ರಾಜಕೀಯವು ಕೇವಲ 'ದುಡ್ಡು ಮಾಡುವ ಕಾರ್ಖಾನೆ'ಯಾಗುವುದನ್ನು ತಪ್ಪಿಸಲು, ಮತದಾರರು ವೈಚಾರಿಕ ಪ್ರಜ್ಞೆ ಬೆಳೆಸಿಕೊಂಡು ಜವಾಬ್ದಾರಿಯುತವಾಗಿ ಹಕ್ಕು ಚಲಾಯಿಸಬೇಕಾದ ಅನಿವಾರ್ಯತೆಯನ್ನು ಅವರು ದೃಢವಾಗಿ ಪ್ರತಿಪಾದಿಸಿದ್ದಾರೆ.

**KEYWORDS:** ಡಿ. ಎಸ್. ವೀರಯ್ಯ, ರಾಜಕೀಯ ಚಿಂತನೆ, ಅಂಬೇಡ್ಕರ್ ಆಶಯ, ಪ್ರಜಾಪ್ರಭುತ್ವದ ವಿಮರ್ಶೆ, ವೈಚಾರಿಕ ಪ್ರಜ್ಞೆ.

* **ಸದಾಶಿವ ಬಿ.**, ಸಂಶೋಧಕರು, ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.

** **ಡಾ. ಕೆ. ಶಾರದಾ,** ಪ್ರಾಧ್ಯಾಪಕರು, ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.

ವೀರಯ್ಯನವರು ಸಾಹಿತಿಯಾಗಿ, ಚಳುವಳಿಗಾರರಾಗಿ, ಸಂಘಟನಾಕಾರರಾಗಿ, ರಾಜಕೀಯ ವ್ಯಕ್ತಿಯಾಗಿ ಹಲವು ನೆಲೆಗಳಲ್ಲಿ ತಮ್ಮ ಬದುಕನ್ನು ವಿಸ್ತರಿಸಿಕೊಂಡವರು. ತಮ್ಮ ರಾಜಕೀಯ ಚಿಂತನೆಗಳನ್ನು ಕಾರ್ಯರೂಪಕ್ಕೆ ತರಲು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರು. ಇವರ ರಾಜಕೀಯ ಪ್ರವೇಶಕ್ಕೂ ಮುನ್ನ ತಮ್ಮ ಸಾಹಿತ್ಯದಲ್ಲಿ ತಮ್ಮ ರಾಜಕೀಯ ಚಿಂತನೆಗಳನ್ನು ಕಟ್ಟಿಕೊಂಡರು. ಪ್ರಸ್ತುತ ಈ ಲೇಖನದಲ್ಲಿ ವೀರಯ್ಯನವರ ರಾಜಕೀಯ ಚಿಂತನೆಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ವೀರಯ್ಯನವರಿಗೆ ರಾಜಕೀಯ ಮತ್ತು ಸಾಹಿತ್ಯ ಒಂದೇ ಆತ್ಮದ ಎರಡು ದೇಹಗಳು. ಈ ಎರಡೂ ಸಾಮಾಜಿಕ ಪ್ರಜ್ಞೆಯ ನೈತಿಕ ಮೌಲ್ಯಗಳನ್ನೇ ಹೊತ್ತಿವೆ. ಅನೇಕ ಎಡಪಂಕ್ತಿಯ ಚಿಂತನಾಧಾರೆಗಳು ಅವರ ರಾಜಕೀಯ ಬದುಕನ್ನು ಸಾಹಿತ್ಯದ ಸಂವಾದಗಳನ್ನು ರೂಪಿಸಿವೆ. ಒಂದು ಸಿದ್ಧಾಂತ, ಮತ್ತೊಂದು ಪ್ರಯೋಗ ಸಾಹಿತ್ಯವಾದರೆ ಅದರ ಪ್ರಯೋಗಕ್ಷೇತ್ರ ರಾಜಕೀಯಕ್ಷೇತ್ರ. ಸೈದ್ಧಾಂತಿಕ ಬದ್ಧತೆ ಎಂಬುದು ರಾಜಕಾರಣಿಗೆ ಎಷ್ಟು ಮುಖ್ಯವೆಂಬುದು ಡಿ.ಎಸ್. ವೀರಯ್ಯನವರ ಬದುಕು- ಬರಹಗಳಿಂದ ಸ್ಪಷ್ಟವಾಗುತ್ತದೆ.

ವೀರಯ್ಯನವರಿಗೆ ರಾಜಕೀಯವು ಜೀವನದ ಉಪಾಧಿಯಲ್ಲ. ಸ್ಥಾನಮಾನವನ್ನು ನಿರ್ದೇಶಿಸುವ ಏರು ಮೆಟ್ಟಿಲೂ ಅಲ್ಲ. ಅದು ಸಮುದಾಯಗಳ ಆರೋಗ್ಯಕರ ಚಿಂತನೆಗೆ ಮತ್ತು ಅನುಷ್ಠಾನಕ್ಕೆ ಒರೆಗಲ್ಲು. ತಮ್ಮ ನೆಚ್ಚಿನ ಸಿದ್ಧಾಂತಗಳ ಪ್ರಯೋಗ ಶಾಲೆ. ಸಂವಿಧಾನಿಕ ಆಶಯಗಳ ಅನುಷ್ಠಾನದ ಪೀಠಿಕೆ. ಅಪಾರ ಸಮಾಜಶಾಸ್ತ್ರೀಯ ಓದು ಚಳವಳಿಗಳ ಒಡನಾಟ, ಎಡಪಂಕ್ತಿಯ ಚಿಂತನೆಗಳು ಮೈಗೇರಿಸಿದ ವೈಚಾರಿಕತೆ, ಹುಟ್ಟಿನಿಂದಲೇ ಅಂಟಿಕೊಂಡ ದಲಿತತ್ವದ ಬವಣೆಯ ಅನುಭವಗಳು, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಅಸಮಾನತೆಗಳು ತಂದೊಡ್ಡಿದ ಅಪಮಾನಗಳು ವೀರಯ್ಯನವರ ರಾಜಕೀಯ ಚಿಂತನೆಗಳನ್ನು ರೂಪಿಸಿವೆ. ಅವು ಸೈದ್ಧಾಂತಿಕತೆಗಷ್ಟೇ ಅಂಟಿಕೊಂಡಿಲ್ಲ. ವೈಚಾರಿಕತೆಯನ್ನು ರೂಪಿಸಿಕೊಂಡಿವೆ. ಸಮಾಜ ಮತ್ತು ಸಾಮಾಜಿಕ ಅಸಮಾನತೆಗಳನ್ನು ಮುಖಾಮುಖಿಯಾಗುವಂತೆ ಮಾಡಿವೆ. ಸಂಘರ್ಷದ ಬದುಕು, ಸಂಘರ್ಷದಿಂದ ತುಂಬಿದ ಸಮಾಜದ ನಡುವೆ ಬದುಕಿದ ವೀರಯ್ಯನವರಿಗೆ ರಾಜಕೀಯವೆಂಬುದು ವ್ಯಂಗ್ಯವನ್ನು ಹೊತ್ತ ಟೋಪಿಯಲ್ಲ. ಸಮಾಜದಲ್ಲಿ ಆದರ್ಶ ಸಮಾಜವನ್ನು ಕಟ್ಟಿಕೊಡುವಲ್ಲಿ ದುಡಿಯುವ ಆದರ್ಶ ವ್ಯಕ್ತಿಯೊಬ್ಬನ ಸಮರ್ಪಣಾಭಾವ, ಸಮರ್ಪಣಾ ಚಿಂತನೆ, ಜಾತ್ಯಾತೀತತೆ, ಸಮ್ಮೈಕ್ಯತೆ, ವಿಶ್ವಭ್ರಾತೃತ್ವ, ಸಹಸಂವಾದ, ವರ್ಗ-ವರ್ಣ ತಾರತಮ್ಯಗಳರಿಯದ ಆದರ್ಶ ಸಮಾಜದ ಚಿಂತನೆಗಳು ಇವರ ರಾಜಕೀಯ ಚಿಂತನೆಗಳನ್ನು ರೂಪಿಸಿವೆ. ಹೋರಾಟದ ಮೂಲಕವಾದರೂ ಉತ್ತಮ ಆದರ್ಶ ಸಮಾಜವನ್ನು ಕಟ್ಟಬೇಕೆಂಬ ಕನಸು ಇವರ ರಾಜಕೀಯ ಚಿಂತನೆಗಳಿಗೂ ಮತ್ತು ಅವರ ರಾಜಕೀಯ ಪ್ರವೇಶಕ್ಕೂ ದಾರಿದೀಪಗಳಾಗಿವೆ.

ಡಿ. ಎಸ್. ವೀರಯ್ಯನವರು ರಾಜಕೀಯದ ಕುರಿತಂತೆ ತಮ್ಮದೇ ಆದ ಸ್ಪಷ್ಟ ನಿಲುವುಗಳನ್ನು, ಆಲೋಚನೆಗಳನ್ನು ಹೊಂದಿದ್ದರು. ಸುಮಾರು ನಾಲ್ಕು ದಶಕಗಳ ಕಾಲ ರಾಜಕೀಯ ಜೀವನದಲ್ಲಿ ಇದ್ದುಕೊಂಡು ತಮ್ಮ ಸ್ಥಾನಕ್ಕೆ ನ್ಯಾಯ ಒದಗಿಸಿಕೊಟ್ಟವರು. ತಾವು ಮಾಡುತ್ತಿದ್ದ ಬ್ಯಾಂಕ್ ಮ್ಯಾನೇಜರ್ ಕೆಲಸವನ್ನು ಬಿಟ್ಟು ಲೋಕಶಕ್ತಿ ಪಕ್ಷದ ಮೂಲಕ ರಾಜಕೀಯ ಸೇರಿಕೊಂಡರು. ವಿಧಾನಸಭಾ ಚುನಾವಣೆಯಲ್ಲಿ ಮಳವಳ್ಳಿ ಕ್ಷೇತ್ರದ ಮೂಲಕ ಟಿಕೆಟ್ ಪಡೆಯುವ ನಿರೀಕ್ಷೆ ಹೊಂದಿದ್ದರು. ಅದು ವಿಫಲವಾದ ಹಿನ್ನೆಲೆಯಲ್ಲಿ ಲೋಕಶಕ್ತಿ ಪಕ್ಷವನ್ನು ತೊರೆದು ಭಾರತೀಯ ಜನತಾ ಪಕ್ಷವನ್ನು ಸೇರಿದರು. 2004ರಲ್ಲಿ ಕೋಲಾರ ಲೋಕಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಚುನಾವಣೆಗೆ ನಿಂತು ಅತ್ಯಂತ ಕಡಿಮೆ ಅಂತರದಲ್ಲಿ ಪರಾಭವಗೊಂಡರು. ಆದರೂ ಅವರ ಕಾರ್ಯದಕ್ಷತೆ, ಗುರಿ, ಉದ್ದೇಶಗಳನ್ನು ಗಮನಿಸಿ 2006ರಲ್ಲಿ ಅವರನ್ನು ವಿಧಾನಪರಿಷತ್ತಿಗೆ ನಾಮಕರಣ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಆರು ವರ್ಷಗಳ ಕಾಲ ಪರಿಷತ್ತಿನಲ್ಲಿ ಪ್ರಾಮಾಣಿಕವಾಗಿ ಸಮಾಜದ ಹಿತಕ್ಕಾಗಿ ದುಡಿದರು. ಇವರ ಕಾರ್ಯ ರೀತಿಯನ್ನು ಕಂಡು, ಅವಧಿ ಮುಗಿದ ನಂತರದಲ್ಲಿ ಮತ್ತೊಮ್ಮೆ ಎರಡನೇ ಅವಧಿಗೆ ಅವರನ್ನು ಮರುನಾಮಕರಣ ಮಾಡಲಾಯಿತು. ಇದು ವೀರಯ್ಯನವರ ರಾಜಕೀಯ ಪ್ರಾಬಲ್ಯವನ್ನು ಮತ್ತು ಅವರ ಜನಪ್ರಿಯತೆಯನ್ನು ತೋರುತ್ತದೆ.

ಒಟ್ಟಾರೆ 12 ವರ್ಷಗಳ ಕಾಲ ಅವರ ಅಧಿಕಾರ ಅವಧಿಯಲ್ಲಿ ಅನೇಕ ವಿಷಯಗಳನ್ನು ಕುರಿತಂತೆ ಹೋರಾಟ ಮತ್ತು ಚರ್ಚೆಗಳನ್ನು ಮಾಡಿದರು. ಇವರ ಕಾರ್ಯಗಳನ್ನು ಪ್ರತ್ಯಕ್ಷವಾಗಿ ಕಂಡಿದ್ದ ಡಾ. ದೊಡ್ಡ ರಂಗೇಗೌಡರು "12 ವರ್ಷಗಳ ಕಾಲ ವಿಧಾನ ಪರಿಷತ್‌ನಲ್ಲಿ ಪ್ರಬಲವಾಗಿಯೇ ಪ್ರತಿನಿಧಿಸಿದವರು. ನೋವು ನಲಿವು ಕಂಡವರು. ಅನೇಕ ವಿಷಯಗಳಲ್ಲಿ ಸರ್ಕಾರದ ಕಣ್ಣು ತೆರೆಸಿದವರು" ಎಂದು ಹೇಳಿದ್ದಾರೆ. ಮುಂದುವರೆದು "ತಾವು ಪ್ರತಿನಿಧಿಸಿದ ಸಮುದಾಯದ ಘನತೆ ಗೌರವಗಳನ್ನು ಸದಾ ಎತ್ತಿ ಹಿಡಿಯುತ್ತಾ, ತಮ್ಮ ಸಮಸ್ಯೆಗಳ ಮನಮುಟ್ಟುವಂತೆ ಸರ್ಕಾರಕ್ಕೆ ತಿಳಿಸುತ್ತಾ, ಸುಧಾರಣಾವಾದಿಯಾಗಿ ತಮ್ಮ ಸಮುದಾಯದ ರೂಪಾಂತರಕ್ಕೆ ಕಾರಣರಾದವರು. ಡಿ. ಎಸ್. ವೀರಯ್ಯ ಅವರು" ಎಂದು ಹೊಗಳಿದ್ದಾರೆ. ಇದೆಲ್ಲವೂ ವೀರಯ್ಯನವರ ವ್ಯಕ್ತಿತ್ವ ಮತ್ತು ಕಾರ್ಯಶೀಲತೆಯನ್ನು ಅರಿಯಲು ನಮಗೆ ಸಹಕಾರಿಯಾಗುತ್ತದೆ. 12 ವರ್ಷಗಳ ಅವಧಿಯಲ್ಲಿ ನಡೆದ ಕಲಾಪಗಳಲ್ಲಿ ವೀರಯ್ಯನವರು ಯಾವತ್ತೂ ಪೂರ್ವ ತಯಾರಿಯಿಲ್ಲದೆ ಹೋಗುತ್ತಿರಲಿಲ್ಲ. ತಾವು ಪ್ರಸ್ತಾಪಿಸಬೇಕಾದ ವಿಷಯದ ಬಗ್ಗೆ ಸಂಶೋಧನೆ ನಡೆಸಿ, ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ, ಆನಂತರ ಆ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುತ್ತಿದ್ದರು. ಒಟ್ಟಾರೆಯಾಗಿ ತಮಗೆ ಸಿಕ್ಕಿರುವ ಸ್ಥಾನದಲ್ಲಿ ನಿಂತುಕೊಂಡು ಸಮಾಜಕ್ಕೆ, ದೇಶಕ್ಕೆ ಯಾವೆಲ್ಲ ಕೆಲಸಗಳನ್ನು ಮಾಡಬಹುದೋ ಅವೆಲ್ಲವನ್ನು ಮನಃಪೂರ್ವಕವಾಗಿ ಮಾಡಿದರು.

ಅಂಬೇಡ್ಕರ್ ಅವರ ಪ್ರಾಮಾಣಿಕ ಮತ್ತು ಪ್ರಬಲ ಅನುಯಾಯಿಯಾಗಿರುವ

ವೀರಯ್ಯನವರು ತಮ್ಮ ಜೀವನದ ಪ್ರತಿಯೊಂದು ಹಂತದಲ್ಲಿಯೂ ಅಂಬೇಡ್ಕರರ ಆಶಯವನ್ನು ಉಸಿರಾಡಿದವರು. ಅವರ ಆಶಯದಂತೆ ಸಮಾನತೆಯ ಸಮಾಜವನ್ನು ನಿರ್ಮಿಸುವುದಕ್ಕಾಗಿ ಯತ್ನಿಸಿದರು. ವೀರಯ್ಯನವರು ರಾಜಕೀಯಕ್ಕೆ ಬರಲು ಮುಖ್ಯ ಕಾರಣವೇ ಅಂಬೇಡ್ಕರ್ ಅವರ ಚಿಂತನೆಗಳು. ರಾಜಕೀಯ ಅಧಿಕಾರದ ಮೂಲಕ ತಮ್ಮ ಸಮುದಾಯದ ಅಭಿವೃದ್ಧಿಗಾಗಿ ವೀರಯ್ಯನವರು ಯತ್ನಿಸಿದರು. ಇದು ಅಂಬೇಡ್ಕರ್ ಅವರ ಆಲೋಚನೆಯಾಗಿತ್ತು. ಬ್ರಿಟೀಷರ ನಿರ್ಗಮನದ ನಂತರದಲ್ಲಿ ಭಾರತವು ತನ್ನದೇ ಆದ ಸಂವಿಧಾನವನ್ನು ಅಳವಡಿಸಿಕೊಂಡಿತು. ಇದರಲ್ಲಿ ಅಂಬೇಡ್ಕರ್ ಅವರ ಪಾತ್ರವೂ ಬಹು ಮಹತ್ವದ್ದಾಗಿದೆ. ಸಂವಿಧಾನದ ಮೂಲಕ ಭಾರತದ ಪ್ರತಿಯೊಬ್ಬ ಪ್ರಜೆಯೂ ಸಹ ಯಾವುದೇ ಭೇದವಿಲ್ಲದೆ ಮತದಾನದ ಸಮಾನ ಹಕ್ಕನ್ನು ಪಡೆದುಕೊಂಡರು. ತಮಗೆ ಇಷ್ಟವಾಗುವ ವ್ಯಕ್ತಿಯನ್ನು ಆಯ್ಕೆ ಮಾಡುವ ಅಧಿಕಾರವನ್ನು ಪಡೆದುಕೊಂಡರು. ಆದರೂ ಸಹ ಜನರಿಗೆ ನ್ಯಾಯ ಒದಗಿಸಬಲ್ಲ ಸೂಕ್ತ ರಾಜಕೀಯ ನಾಯಕರು ಚುನಾವಣೆಯಲ್ಲಿ ಆರಿಸಿ ಬರುತ್ತಿಲ್ಲವೆಂಬ ಕೊರಗು ವೀರಯ್ಯನವರಿಗೆ ಇದೆ. ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವಾಗಿರುವ ಭಾರತದಲ್ಲಿ ಪ್ರಜಾಪ್ರಭುತ್ವ ಹೆಸರಿಗೆ ಮಾತ್ರವೇ ಎನ್ನುವಂತಾಗಿದೆ.

ಭಾರತದಲ್ಲಿಯ ಪ್ರಸ್ತುತ ರಾಜಕೀಯ ಸ್ಥಿತಿಯ ಕುರಿತು "ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿ ಲೆಕ್ಕ ಹಾಕುವುದು ಅವನಿಗೆ ಬರುವ ಸಂಬಳದ ಆದಾಯವನ್ನಲ್ಲ. ಆತ ಲೆಕ್ಕ ಹಾಕುವುದು ತನ್ನ ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರ ಖರ್ಚು ಮಾಡುವ ಹಣದಲ್ಲಿ ಅವನಿಗೆ ಬರುವ ಪಾಲೆಷ್ಟು? ತನ್ನ ಅಧಿಕಾರಾವಧಿಯಲ್ಲಿ ನಡೆಯುವ ಕಾಮಗಾರಿ ಅವ್ಯವಹಾರಗಳಲ್ಲಿ ತನಗೆ ಸಿಗುವ ಕಮಿಷನಿನ ಸಿಂಹಪಾಲೆಷ್ಟು? ತಾನು ಕೈಹಾಕುವ ವ್ಯವಹಾರಗಳಲ್ಲಿ ತನಗೆಷ್ಟು ಲಾಭ? ಅವನ ಅಧಿಕಾರಾವಧಿಯಲ್ಲಿ ಎಷ್ಟು ಕೋಟಿ ಹಣ ಮಾಡಬಹುದು? ಎಷ್ಟು ಮನೆಗಳನ್ನು ಕಟ್ಟಬಹುದು? ಎಷ್ಟು ಆಸ್ತಿ ಸಂಪಾದಿಸಬಹುದು?" ಎಂದು ವ್ಯಂಗ್ಯವಾಗಿ ಚುನಾಯಿತ ನಾಯಕರನ್ನು ಟೀಕಿಸುತ್ತಾರೆ. ಇದು ವಾಸ್ತವವೂ ಹೌದು. ತನ್ನನ್ನು ನಂಬಿ ಆಯ್ಕೆ ಮಾಡಿದ ಕ್ಷೇತ್ರದ ಜನರನ್ನು ಯಾವೆಲ್ಲ ರೀತಿಯಾಗಿ ವಂಚಿಸಬಹುದು ಎಂಬುದರ ಕುರಿತಾಗಿಯೇ ಬಹುಪಾಲು ಮಂದಿ ಆಲೋಚಿಸುತ್ತಾರೆ. ಚುನಾವಣೆಯಲ್ಲಿ ಗೆಲ್ಲಲು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಾರೆ. ಗೆದ್ದು ಬಂದ ಮೇಲೆ ತಾವು ಖರ್ಚು ಮಾಡಿದ ಹಣವನ್ನು ಮರಳಿ ಸಂಪಾದಿಸಿ, ಅದರ ಮೇಲೆ ಅನೇಕ ತಲೆಮಾರುಗಳಿಗೆ ಸಾಕಾಗುವಷ್ಟು ಆಸ್ತಿಯನ್ನು ಮಾಡುತ್ತಾರೆ. ಮತ್ತೊಮ್ಮೆ ಚುನಾವಣೆಯಲ್ಲಿ ಖರ್ಚು ಮಾಡುವುದಕ್ಕಾಗಿಯೇ ಇಂತಿಷ್ಟು ಹಣ ಎಂದು ಸಂಗ್ರಹಿಸಿರುತ್ತಾರೆ. ಜನರ ಅಭಿವೃದ್ಧಿಯನ್ನು ಮಾಡದೆ, ಕ್ಷೇತ್ರದ ಕುರಿತಾಗಿಯೂ ಚಿಂತಿಸದೆ ಭ್ರಷ್ಟಾಚಾರದಲ್ಲಿ ಕಾಲ ತಳ್ಳುವಂತಹವರೇ ಇಂದು ಬಹುಪಾಲು ರಾಜಕೀಯವನ್ನು ಆಕ್ರಮಿಸಿಕೊಂಡಿದ್ದಾರೆ. ಇಂತಹವರ ಕುರಿತಂತೆ ವೀರಯ್ಯನವರಿಗೆ ರೋಷವಿದೆ. ಯಾವ ಅರ್ಹತೆಯೂ ಇಲ್ಲದೆ ಜಾತಿ, ಹಣ, ದರ್ಪ, ಅಧಿಕಾರ, ಪ್ರಭಾವ ಮುಂತಾದವುಗಳನ್ನು ಉಪಯೋಗಿಸಿಕೊಂಡು ಅವರು ಗೆದ್ದು ಬರುತ್ತಾರೆಂಬುದೇ ಈ ರೋಷಕ್ಕೆ

ಕಾರಣವಾಗಿದೆ.

'ಹುಚ್ಚಿ ಮದುವೇಲಿ ಉಂಡೋನೆ ಜಾಣ' ಎಂಬ ಲೇಖನವು ತೀವ್ರ ವ್ಯಂಗ್ಯದಿಂದ ಕೂಡಿದ ರಾಜಕೀಯ ವಿಮರ್ಶೆಗಳನ್ನು ಒಳಗೊಂಡಿದೆ. "ಒಬ್ಬ ರಾಜಕಾರಣಿ ಒಮ್ಮೆ ಕಳ್ಳತನ ಮಾಡಿ ಸಿಕ್ಕಿಬಿದ್ದಿದ್ದ. ಆತನನ್ನು ಬೀದಿ ಬೀದಿಯಲ್ಲಿ ಕೈಗೆ ಕೋಳ ತೊಡಿಸಿ ಮೆರವಣಿಗೆ ಮಾಡಲಾಗಿತ್ತು. ಕೋರ್ಟಿಗೆ ಹಾಜರುಪಡಿಸಲಾಗಿತ್ತು. ಜೈಲಿಗೆ ಕಳಿಸಲಾಗಿತ್ತು. ಆತ ಮುಂದೊಂದು ದಿನ ಚುನಾವಣೆಗೆ ನಿಂತು ಗೆದ್ದು ಬಂದು ಜೈಲು ಮಂತ್ರಿಯಾದ." 'ಕಳ್ಳನಿಗೆ ಕೀಲಿ ಕೈ ಕೊಟ್ಟಂತೆ' ಎಂಬ ಗಾದೆಯಂತೆ ಎಂತವರು ಅಧಿಕಾರಕ್ಕೆ ಬರುತ್ತಾರೆ ಅಥವಾ ಎಂತವರನ್ನು ಜನರು ಅಧಿಕಾರದಲ್ಲಿ ಕೂಡಿಸುತ್ತಾರೆ ಎಂಬುದಕ್ಕೆ ಇಂತಹ ಘಟನೆಗಳು ಕನ್ನಡಿ ಹಿಡಿಯುತ್ತವೆ. ಕೇವಲ ಇದೊಂದೇ ಘಟನೆಯನ್ನು ಮಾತ್ರ ವೀರಯ್ಯನವರು ಉಲ್ಲೇಖಿಸುವುದಿಲ್ಲ. ಇನ್ನು ಇಂತಹದ್ದೇ ಹಲವಾರು ಉದಾಹರಣೆಗಳನ್ನು ಅವರು ನೀಡುತ್ತಾರೆ. ಸರ್ಕಾರಿ ಜಮೀನುಗಳನ್ನು ಕಬಳಿಸಿದವನು ಕಂದಾಯ ಮಂತ್ರಿ ಆಗುವುದು, ಅಕ್ರಮವಾಗಿ ಭೂಮಿ ಅಗೆದು ಅದಿರು ಮಾರಿದವನು ಗಣಿ ಮಂತ್ರಿ ಆಗುವುದು, ದೇವಸ್ಥಾನದ ವಿಗ್ರಹಗಳನ್ನು ಕದಿಯುತ್ತಿದ್ದವನು ಮುಜರಾಯಿ ಮಂತ್ರಿ ಆಗುವುದು, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಕ್ರಮ ಕಿಡ್ನಿ ದಂಧೆ ಮಾಡುವವನು ಆರೋಗ್ಯ ಮಂತ್ರಿಯಾಗುವುದು, ಓದು ಬರಹ ತಿಳಿಯದ ದಡ್ಡರು ಶಿಕ್ಷಣ ಮಂತ್ರಿಯಾಗುವುದು, ಕಾಮುಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ ಆಗುವುದು... ಹೀಗೆ ವೀರಯ್ಯನವರು ನೀಡುವ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಯಾರು ಯಾವುದನ್ನು ನಾಶಪಡಿಸುತ್ತಾರೋ ಅಂತಹವರಿಗೆ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ನೀಡುವುದು ಪ್ರಜಾಪ್ರಭುತ್ವದ ವ್ಯಂಗ್ಯವಲ್ಲದೆ ಮತ್ತೇನು ಅಲ್ಲ. ಬಹುಪಾಲು ಮಂತ್ರಿಗಳು ತಮ್ಮ ಸ್ಥಾನಕ್ಕೆ ನ್ಯಾಯ ಒದಗಿಸುವುದೇ ಇಲ್ಲ. ಬದಲಾಗಿ ಅದನ್ನು ಹಾಳು ಮಾಡಲು ಯೋಚಿಸುತ್ತಾರೆ. ಮತ ಹಾಕಿ ಅವರನ್ನು ಗೆಲ್ಲಿಸಿದ ಜನರು ಕೂಡ ಆ ಅನ್ಯಾಯಗಳನ್ನು ಕಂಡು ಕಾಣದಂತೆ ಸುಮ್ಮನಿದ್ದು ಬಿಡುತ್ತಾರೆ. ಭ್ರಷ್ಟಾಚಾರವು ಅವ್ಯಾಹತವಾಗಿ ನಡೆಯುತ್ತಲೇ ಸಾಗುತ್ತದೆ. ಹೀಗೆಂದೇ ವೀರಯ್ಯನವರು "ಪ್ರಜಾಪ್ರಭುತ್ವವು ಮೇಯುವ ದನಗಳಿಗೆ ಫಲವತ್ತಾದ ಹುಲ್ಲುಗಾವಲು. ಮೇಯಲು ಆಗದ ದನಗಳಿಗೆ ಬಯಲು ಸೀಮೆ. ಬರಡು ಭೂಮಿ" ಎಂದು ಹೇಳುತ್ತಾರೆ. ಭಾರತದ ಪ್ರಸ್ತುತ ರಾಜಕೀಯ ವ್ಯವಸ್ಥೆಯನ್ನು ಗಮನಿಸಿದಾಗ ವೀರಯ್ಯನವರ ಈ ಮಾತು ಸತ್ಯವೆನಿಸದೆ ಇರಲಾರದು. ಇಂತಹ ಸ್ಥಿತಿಗೆ ಕಾರಣಗಳನ್ನು ಸಹ ವೀರಯ್ಯನವರು ಗುರುತಿಸುತ್ತಾರೆ. ಜಾತಿ, ಧರ್ಮ, ಭಾಷೆ, ರಾಜ್ಯ ಮುಂತಾದ ಹಲವು ವಿಧಗಳಲ್ಲಿ ಜನರನ್ನು ಒಡೆಯಲಾಗಿದೆ. ಅವರುಗಳು ಯಾವುದೇ ಕಾರಣಕ್ಕೂ ಒಂದಾಗದಂತೆ ರಾಜಕೀಯ ಪಕ್ಷಗಳು ಪ್ರಯತ್ನಿಸುತ್ತಿವೆ. ದೇಶದ, ಸಮಾಜದ ಅಭಿವೃದ್ಧಿಯ ಪರವಾಗಿ ಜನರು ಯೋಚಿಸುವುದಕ್ಕೆ ಆಸ್ಪದ ನೀಡದೆ, ಅವರನ್ನು ಬೇರೆ ಬೇರೆ ವಿಚಾರಗಳಲ್ಲಿ ಮಗ್ನರಾಗುವಂತೆ ಮಾಡಲಾಗುತ್ತಿದೆ.

ಇದು ಸಮುದಾಯಪ್ರಜ್ಞೆಗೆ ಮತ್ತು ಪ್ರಜೆಯು ಇಟ್ಟುಕೊಳ್ಳಬೇಕಾದ ರಾಜಕೀಯ ಪ್ರಜ್ಞೆಗೂ; ತಿಳುವಳಿಕೆಗೂ ಕೊಡಲಿ ಪೆಟ್ಟೆನ್ನಬಹುದು.

ಸಂವಿಧಾನದ ನಿಜವಾದ ಆಶಯಗಳನ್ನು ಗಾಳಿಗೆ ತೂರಿ, ಅವುಗಳನ್ನು ತಮ್ಮ ಆಶಯಕ್ಕೆ ಅನುಗುಣವಾಗಿ ರಾಜಕೀಯ ವ್ಯಕ್ತಿಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳು ಸದೃಢವಾದರೆ ನಾಯಕರು ಸದೃಢವಾಗುತ್ತಾರೆ. ಈ ಕುರಿತಂತೆ ವೀರಯ್ಯನವರು "ಪ್ರಜಾಪ್ರಭುತ್ವ ವ್ಯವಸ್ಥೆ ತಾರ್ಕಿಕ ವ್ಯವಸ್ಥೆಯಾಗಿರಬೇಕು. ಬಹುಮತ ಪಡೆದ ಪಕ್ಷ ಅಧಿಕಾರ ಮಾಡಬೇಕು. ಬಹುಮತ ಪಡೆಯದ ಪಕ್ಷಗಳು ಪ್ರತಿಪಕ್ಷವಾಗಿ ಕೆಲಸ ಮಾಡಬೇಕು. ಹೀಗೆ ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳೆರಡೂ ಒಂದು ಬಂಡಿಯ ಎರಡು ಗಾಲಿಗಳಂತೆ ಈ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ರೂಪಿಸಬೇಕು. ಅವುಗಳನ್ನು ಅನುಷ್ಠಾನಕ್ಕೆ ತರಬೇಕು. ಈ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ನಿಭಾಯಿಸಬೇಕು. ಈ ರಾಷ್ಟ್ರದ ಅಖಂಡತೆಯನ್ನು ಕಾಪಾಡಿಕೊಳ್ಳಬೇಕು. ಸಮಗ್ರ ಅಭಿವೃದ್ಧಿಯನ್ನು ಮಾಡಬೇಕು. ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡಬೇಕು. ಸಮಾನತೆಯನ್ನು ಕಾಪಾಡಿಕೊಳ್ಳಬೇಕು. ಜಾತ್ಯಾತೀತ ಸಮಾಜ ನಿರ್ಮಾಣದತ್ತ ಹೆಜ್ಜೆ ಇಡಬೇಕು" ಎಂದು ತಮ್ಮ ಆಶಯಗಳನ್ನು ವ್ಯಕ್ತಪಡಿಸುತ್ತಾರೆ. ಆದರೆ ಇವರ ಈ ಆಶಯಗಳು ನೆರವೇರಲು ದಾರಿಗಳು ಸುಲಭವಾಗಿಲ್ಲ. ರಾಜಕೀಯ ನಾಯಕರು ದೇಶದ ಅಭಿವೃದ್ಧಿ ಮಾಡುವುದಾಗಿಯೇ ಅಧಿಕಾರ ಹಿಡಿದರೂ ತಮ್ಮ ಸ್ವ ಅಭಿವೃದ್ಧಿಯನ್ನು ಮಾತ್ರವೇ ಅವರು ಮಾಡಿಕೊಳ್ಳುತ್ತಾರೆ. ಸಂವಿಧಾನದ ಪ್ರಕಾರವೇ ಅಧಿಕಾರವನ್ನು ಹಿಡಿದರೂ ಕೂಡ ಆ ಸಂವಿಧಾನವನ್ನು ದುರ್ಬಲಗೊಳಿಸುವ ಕೆಲಸ ಮಾಡುತ್ತಾರೆ.

ಪ್ರಸ್ತುತ ಸ್ಥಿತಿಯನ್ನು ಕುರಿತು ವೀರಯ್ಯನವರೇ ಮುಂದುವರೆದು ಹೇಳುವಂತೆ "ಪಾರ್ಲಿಮೆಂಟುಗಳು, ವಿಧಾನಸಭೆಗಳು ಅವೈಜ್ಞಾನಿಕ ತರ್ಕಗಳ ಆಗರವಾಗಿವೆ. ನಿರರ್ಥಕ ಚರ್ಚೆಗಳ ಸಂತೆಯಂತಾಗಿವೆ. ಮೀನು ಮಾರುಕಟ್ಟೆಗಳಾಗಿವೆ. ಹೀಗಿರುವಾಗ ಪ್ರತಿಪಕ್ಷಗಳು ಎಲ್ಲವನ್ನು ವಿರೋಧಿಸುವ ನಿಜ ಅರ್ಥದ ವಿರೋಧಪಕ್ಷಗಳಾಗಿ ಮಾರ್ಪಟ್ಟಿವೆ" . ಇಂದಿನ ರಾಜಕೀಯ ಪಕ್ಷಗಳು ಒಬ್ಬರು ಮತ್ತೊಬ್ಬರ ಮೇಲೆ ಪರಸ್ಪರ ಆರೋಪ ಮಾಡುವುದನ್ನು ವೃತ್ತಿಯನ್ನಾಗಿಸಿಕೊಂಡಿವೆ. ಯಾರು ಉತ್ತಮರು ಎನ್ನುವುದಕ್ಕಿಂತ, ಯಾರು ಅಧಮರು ಎಂಬುದನ್ನು ಸಾಬೀತುಪಡಿಸಲು ಈ ಆರೋಪ ಪ್ರತ್ಯಾರೋಪಗಳು ನಡೆಯುತ್ತಿವೆ. ಅಧಿಕಾರ ಹಿಡಿದ ಪಕ್ಷ ಯಾವುದೇ ಕೆಲಸ ಮಾಡಿದರು ಅದನ್ನು ವಿರೋಧಿಸುವ ಕೆಲಸವನ್ನು ವಿರೋಧ ಪಕ್ಷಗಳು ಮಾಡುತ್ತವೆ. ವಿರೋಧ ಪಕ್ಷಗಳು ಎಂತದ್ದೇ ಒಳ್ಳೆಯ ಸಲಹೆ ನೀಡಿದರು ಕೂಡ ಅದನ್ನು ನಿರ್ಲಕ್ಷ ಮಾಡುವ ಕೆಲಸವನ್ನು ಆಡಳಿತ ಪಕ್ಷಗಳು ಮಾಡುತ್ತವೆ. ಒಂದು ಮತ್ತೊಂದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿಲ್ಲ. ಅದನ್ನೇ ವೀರಯ್ಯನವರು ಮುಂದುವರಿದು "ಆದರೀಗ ಹೊಡೆದಾಟ, ಅಂಗ ಪ್ರದರ್ಶನ, ಕೈ ಕೈ ಮಿಲಾಯಿಸುವ ಎಲ್ಲಾ ಪ್ರದರ್ಶನಗಳು ನಡೆಯುತ್ತಿವೆ. ಆರೋಪ ಪ್ರತ್ಯಾರೋಪಗಳ ಸುರಿಮಳೆಯೇ ಸುರಿಯುತ್ತಿದೆ. ಒಬ್ಬ ಕಳ್ಳ ಮತ್ತೊಬ್ಬ ಕಳ್ಳನ ಕಳ್ಳತನವನ್ನು ಬಯಲು ಮಾಡುವಂತೆ

ಒಬ್ಬರನ್ನೊಬ್ಬರು ಮೈಪರಚಿಕೊಳ್ಳುತ್ತಾರೆ. ಸಭಾಪತಿಗಳ ಮಾತಿಗೂ ಕವಡೆ ಕಾಸಿನ ಕಿಮ್ಮತ್ತಿಲ್ಲದಂತೆ ನಡೆದುಕೊಳ್ಳಲಾಗುತ್ತಿದೆ. ವಿಧಾನಸಭೆ, ಸಂಸತ್ತು ಎರಡೂ ಗದ್ದಲಗಳ ಗೂಡಾಗಿವೆ. ಅರಚಾಟ ಕಿರುಚಾಟಗಳ ತಾಣವಾಗಿ ಬಿಟ್ಟಿವೆ. ಅವಾಚ್ಯ ಶಬ್ದಗಳು, ಮೂರನೇ ದರ್ಜೆಯ ಮಾತುಗಳು ವಿನಿಮಯವಾಗುತ್ತವೆ. ಧರಣಿ, ಮುಷ್ಕರಗಳು ನಿರಂತರವಾಗಿ ಬಿಟ್ಟಿವೆ. ಸದನ ಮುಂದೂಡಿಕೆ ಅವ್ಯಾಹತವಾಗಿ ನಡೆಯುತ್ತಿದೆ. ಯಾವುದೇ ಸಮಸ್ಯೆಗಳ ಬಗ್ಗೆ ನಿಖರವಾದ ಚರ್ಚೆಯಾಗುವುದಿಲ್ಲ. ಅಂತಿಮ ತೀರ್ಮಾನಗಳಾಗುವುದಿಲ್ಲ. ಗಲಾಟೆ ಗದ್ದಲಗಳ ಮಧ್ಯೆ ಬಿಲ್ಲುಗಳ ಅನುಮೋದನೆಯಾಗುತ್ತಿವೆ. ಎಲ್ಲವೂ ಸಂವಿಧಾನ ವಿರೋಧಿತನಕ್ಕೆ ಹಿಡಿದ ಕನ್ನಡಿಯಂತಿವೆ'' ಎಂದು ಇಂದಿನ ಸಂಸತ್ತಿನ ಕಲಾಪಗಳ ಬಗ್ಗೆ ವೀರಯ್ಯನವರು ಹೇಳುತ್ತಾರೆ.

ಇಲ್ಲಿ ಹೇಳಿರುವ ಎಲ್ಲವೂ ವಾಸ್ತವವಾಗಿ ನಡೆಯುತ್ತಿರುವಂತಹವಾಗಿವೆ. ಕೆಲವರನ್ನು ಹೊರತುಪಡಿಸಿ ಬಹುತೇಕ ರಾಜಕಾರಣಿಗಳು ತಮ್ಮ ಸ್ವಹಿತಾಸಕ್ತಿಗಾಗಿ ಕಲಾಪಗಳಲ್ಲಿ ಭಾಗವಹಿಸುತ್ತಾರೆ. ತಾವು ಮಾತನಾಡುತ್ತಿರುವುದು, ಮಾಡುತ್ತಿರುವುದು ಸರಿ ಇರಲಿ ತಪ್ಪಿರಲಿ ತಮ್ಮ ಪರವಾಗಿ, ತಮ್ಮನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎಂದು ಬಯಸುತ್ತಾರೆ. ಇಲ್ಲವೇ ಸುಮ್ಮನೆ ಏನಾದರೂ ಒಂದು ಮಾತನಾಡಬೇಕೆಂದು ಪ್ರತಿಯೊಂದಕ್ಕೂ ಜಗಳದ ಸ್ವರೂಪ ನೀಡುತ್ತಾರೆ. ಜನರ ಪರವಾಗಿ, ಅವರ ಭವಿಷ್ಯದ ಬಗ್ಗೆ ಯೋಚಿಸಬೇಕಾದ ಕಲಾಪಗಳು ಈ ರೀತಿ ವ್ಯರ್ಥ ಕಾಲಹರಣವಾಗುತ್ತವೆ. ಪ್ರತಿ ಕಲಾಪಕ್ಕೂ ಸರ್ಕಾರ ಅನೇಕ ಕೋಟಿಗಟ್ಟಲೆ ಮೊತ್ತವನ್ನು ಖರ್ಚು ಮಾಡುತ್ತದೆ. ಅದೆಲ್ಲವೂ ವ್ಯರ್ಥವಾಗಿ ಜಗಳದಲ್ಲಿ ಕೊನೆಯಾಗುತ್ತಿದೆ. ವೈಚಾರಿಕವಾಗಿ ಯೋಚಿಸುವ, ಮಾತನಾಡುವ ಪ್ರವೃತ್ತಿ ಯಾರಲ್ಲೂ ಕಾಣಿಸುತ್ತಿಲ್ಲ. ದೇಶದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಅಂಕಿ ಸಂಖ್ಯೆಗಳ ಬಗ್ಗೆ ಯಾರಲ್ಲಿಯೂ ಖಚಿತ ಮಾಹಿತಿ ಇರುವುದಿಲ್ಲ. ಕೇವಲ ತಮ್ಮ ವಾದವನ್ನು ಸಮರ್ಥಿಸಲು ಮಾತ್ರವೇ ಬೇಕಾಬಿಟ್ಟಿಯಾಗಿ ಅಂಕಿ ಅಂಶಗಳನ್ನು ನೀಡುವ ಕೆಲಸ ಮಾಡಲಾಗುತ್ತಿದೆ. ವಾಸ್ತವವನ್ನು ದೂರವಿಟ್ಟು ಸುಳ್ಳುಗಳೊಂದಿಗೆ ತಮ್ಮ ಭಾಷಣಗಳನ್ನು ಮುಂದುವರಿಸುತ್ತಾರೆ. ಕೇವಲ ಆ ಸಂದರ್ಭದಲ್ಲಿ ಮಾತ್ರ ತಮ್ಮ ಕೈ ಮೇಲಾಗಬೇಕೆಂದು ಬಯಸುತ್ತಾರೆಯೇ ವಿನಃ ದೇಶಕ್ಕೆ ಮತ್ತು ಜನತೆಗೆ ಯಾವುದು ಉತ್ತಮವೆಂದು ಅವರೆಂದೂ ಯೋಚಿಸುವುದಿಲ್ಲ. ಇವೆಲ್ಲವೂ ಸಂವಿಧಾನದಲ್ಲಿ ದಾಖಲಾಗಿರುವಂತಹ ನಾಯಕರ ಗುಣಗಳಿಗೆ ವಿರುದ್ಧವಾಗಿರುವಂತಹವು.

ಸರಿಯಾಗಿ ಶಿಕ್ಷಣವನ್ನು ಪಡೆಯದ, ಸಂವಿಧಾನವನ್ನು ಓದಿಕೊಳ್ಳದ, ವೈಚಾರಿಕತೆ, ವೈಜ್ಞಾನಿಕತೆ ಎಂದರೇನು ಎಂದು ತಿಳಿಯದ ರಾಜಕಾರಣಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ಯಾವುದೇ ಹೊಸ ನೋಟಗಳಿಲ್ಲದೆ ವ್ಯರ್ಥವಾಗಿ ತಮ್ಮ ಅಧಿಕಾರಾವಧಿಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಇಂತಹವರಿಗೆ ಮತ ಹಾಕುವ ಜನರು ಕೂಡ ವೈಚಾರಿಕಪ್ರಜ್ಞೆಯ ಕೊರತೆಯಿಂದ ಕೂಡಿದ್ದಾರೆ. ಮೊದಲು ಎಲ್ಲಾ ಜನರಿಗೂ ಸರಿಯಾದ ಶಿಕ್ಷಣ ನೀಡುವ, ವೈಚಾರಿಕ ಗುಣವನ್ನು ಬೆಳೆಸುವ,

ವೈಜ್ಞಾನಿಕವಾಗಿ ಜೀವಿಸುವ ದಾರಿಗಳನ್ನು ಕಲಿಸಿಕೊಡಬೇಕಿದೆ. ಜನರು ಬದಲಾದಾಗ ಮಾತ್ರ ಅವರ ಆಯ್ಕೆಗಳು ಬದಲಾಗುತ್ತವೆ. ಜೊತೆಗೆ ಉತ್ತಮ ನಾಯಕರು ಕೂಡ ಜನರನ್ನು ಬದಲಾವಣೆ ಮಾಡುವ ಶಕ್ತಿಯನ್ನು ಹೊಂದಿರುತ್ತಾರೆ. ಇಲ್ಲಿ ಒಂದು ಮತ್ತೊಂದಕ್ಕೆ ಪೂರಕವಾಗಿರುವಂತದ್ದು. ಆದ್ದರಿಂದ ರಾಜಕೀಯದಲ್ಲಿ ಜನರು ಮತ್ತು ಜನನಾಯಕರು ಇಬ್ಬರು ಸಂಪೂರ್ಣವಾಗಿ ತಾತ್ವಿಕವಾಗಿ ಪಾಲ್ಗೊಳ್ಳುವ ಅವಶ್ಯಕತೆ ಇದೆ.

ಇಂದಿನ ರಾಜಕೀಯ ಸ್ಥಿತಿಗತಿಯ ಕುರಿತು ವೀರಯ್ಯನವರು ಎರಡು ಉದಾಹರಣೆಗಳ ಮೂಲಕ ಹೋಲಿಕೆ ಮಾಡುತ್ತಾರೆ. ಮೊದಲನೆಯದಾಗಿ “ರಾಜಕೀಯ ಕ್ಷೇತ್ರ ಹಿಂದೆ ಸೇವಾ ಕ್ಷೇತ್ರವಾಗಿತ್ತು. ಜನಸೇವೆಯೇ ಗುರಿಯಾಗಿತ್ತು. ಅಭಿವೃದ್ಧಿಯೇ ಮಂತ್ರವಾಗಿತ್ತು. ಜನ ಆರಿಸಿ ಕಳಿಸುವುದು ಆಯಾ ಕ್ಷೇತ್ರದ ಅಭಿವೃದ್ಧಿಗಾಗಿ ಎನ್ನುವಂತಹ ಭಾವನೆಯಾಗಿತ್ತು. ಅದೊಂದು ಜನ ಸೇವೆಗಾಗಿ ಸಿಕ್ಕಂತಹ ಅವಕಾಶಗಳಂತೆ ಭಾವಿಸಲಾಗುತ್ತಿತ್ತು. ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಂಡು ಏನಾದರೂ ಜನ ಗುರುತಿಸುವಂತಹ ಸಾಧನೆ ಮಾಡಿ ತೋರಿಸುವಂತಹ ಅಭಿಲಾಷೆ ಉಳ್ಳದ್ದಾಗಿತ್ತು.” ಇದು ನಿಜವಾದ ರಾಜಕೀಯದ ಅರ್ಥ. ರಾಜಕೀಯವು ಲಾಭ ಮಾಡುವ ಉದ್ದಿಮೆಯಲ್ಲ. ಅದೊಂದು ಸೇವಾ ಕ್ಷೇತ್ರ ಎಂಬುದಾಗಿ ವೀರಯ್ಯನವರು ಸರಿಯಾಗಿ ಗುರುತಿಸುತ್ತಾರೆ. ಇಲ್ಲಿ ಬರುವ ನಾಯಕರು ಸೇವೆಯನ್ನು ಮುಖ್ಯ ಉದ್ದೇಶವಾಗಿ ಉಳ್ಳವರಾಗಿರಬೇಕೇ ವಿನಹ ಲಾಭವನ್ನಲ್ಲ. ಅಭಿವೃದ್ಧಿ ಅವರ ಮಂತ್ರವಾಗಿರಬೇಕು. ಜನರು ಯಾವ ಉದ್ದೇಶಕ್ಕಾಗಿ, ಯಾವೆಲ್ಲ ಕನಸುಗಳನ್ನು ಇಟ್ಟುಕೊಂಡು ತಮ್ಮನ್ನು ಆರಿಸಿ ಕಳಿಸುತ್ತಾರೆಯೋ ಅದಕ್ಕೆ ಪೂರಕವಾಗಿ ದುಡಿಯುವಂಥವರು ನಾಯಕರಾಗುತ್ತಾರೆ. ಆದರೆ ಇಂದು ಆಗುತ್ತಿರುವುದೇನೆಂದರೆ “ಆದರೆ ಅದೀಗ ತಿರುವು ಮುರುವು ಆಗಿದೆ. ಅಂತಹ ಆಶಯಗಳು ಈವೊತ್ತಿನ ಜನಪ್ರತಿನಿಧಿಗಳಿಂದ ದೂರವಾಗಿವೆ. ರಾಜಕೀಯ ಕ್ಷೇತ್ರವಿಂದು ದರ್ಪ ದಬ್ಬಾಳಿಕೆಯ ಕ್ಷೇತ್ರವಾಗಿಬಿಟ್ಟಿದೆ. ಅದಿಂದು ಆಳುವ ಕ್ಷೇತ್ರವಾಗಿಬಿಟ್ಟಿದೆ. ದುಡ್ಡು ಮಾಡುವ ಕಾರ್ಖಾನೆಯಾಗಿ ಬಿಟ್ಟಿದೆ. ಲೂಟಿಕೋರರ ಕ್ಷೇತ್ರವಾಗಿಬಿಟ್ಟಿದೆ. ಕೊಲೆ, ಸುಲಿಗೆ, ದ್ವೇಷಾಸೂಯೆಗಳ ಸ್ವತ್ತಾಗಿಬಿಟ್ಟಿದೆ. ತನ್ನ ಅಧಿಕಾರವಧಿಯಲ್ಲಿ ಅಭಿವೃದ್ಧಿ ರಾಜಕಾರಣಕ್ಕಿಂತ ಹೆಚ್ಚಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ವಂಶ ಪಾರಂಪರ್ಯವಾಗಿ ಆ ಕ್ಷೇತ್ರ ತಮ್ಮ ಕುಟುಂಬದ ಹಿಡಿತದಲ್ಲಿ ಇರಬೇಕೆಂಬ ಹವಣಿಕೆ ಹೆಚ್ಚಾಗತೊಡಗಿದೆ. ಪ್ರಜಾಪ್ರಭುತ್ವದ ಆಶಯಗಳನ್ನು ಗಾಳಿಗೆ ತೂರಲಾಗುತ್ತಿದೆ. ಪ್ರಜೆಗಳನ್ನು ಕೇವಲ ಮತ ಚಲಾಯಿಸುವುದಕ್ಕೆ ಸೀಮಿತಗೊಳಿಸಲಾಗಿದೆ. ಗೆದ್ದ ನಂತರ ಅವರ್ಯಾರೋ ನೀವ್ಯಾರೋ ಎನ್ನುವಂತೆ ಮತದಾರರನ್ನು ಕಾಣಲಾಗುತ್ತಿದೆ” ಎಂದು ವೀರಯ್ಯನವರು ಹೇಳುತ್ತಾರೆ.

ರಾಜಕೀಯ ಸ್ಥಾನವೆಂಬುದು ಅಧಿಕಾರದ ಸ್ಥಾನ ಎಂಬ ದಿಸೆಯಲ್ಲಿಯೇ ಎಲ್ಲರೂ ಅದನ್ನು ಪಡೆಯುವ ಅಭಿಲಾಷೆ ಹೊಂದಿರುತ್ತಾರೆ. ಆ ಜಾಗಕ್ಕೆ ಹೋದ ನಂತರ ಇತರೆ ಸರ್ಕಾರಿ ನೌಕರರಂತೆ ತಾವು ಕೂಡ ಎಂಬುದನ್ನು ಮರೆತುಬಿಡುತ್ತಾರೆ.

ಬದಲಾಗಿ ಸರ್ಕಾರಿ ನೌಕರರನ್ನು ಒಳಗೊಂಡಂತೆ ತಮ್ಮ ಅಧೀನದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಬ್ಬರನ್ನು, ಪ್ರತಿಯೊಂದನ್ನು ನಿಗ್ರಹಿಸಲು ತೊಡಗುತ್ತಾರೆ. ತಮಗೆ ಅಡ್ಡ ಬರುವವರನ್ನು ನಾಶ ಮಾಡುವ, ಪೂರಕವಾಗಿರುವವರಿಗೆ ಲಾಭ ತಂದು ಕೊಡುವ ಕೆಲಸಗಳನ್ನು ಮಾಡಲಾಗುತ್ತದೆ. ತಮ್ಮ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡು, ಅನೈತಿಕ ಚಟುವಟಿಕೆಗಳಲ್ಲಿ ತೊಡಗುವವರ ಸಂಖ್ಯೆ ಇಂದು ಹೆಚ್ಚುತ್ತಿದೆ. "ಸಮಾನತೆ ಜಾತ್ಯತೀತದ ಪದಗಳು ಸವಕಲು ಪದಗಳಾಗುತ್ತಿವೆ. ಇದರಿಂದಾಗಿ ಪ್ರಜಾಪ್ರಭುತ್ವ ತನ್ನ ಅರ್ಥ ಕಳೆದುಕೊಳ್ಳುತ್ತಿದೆ. ದುರ್ಬಲವಾಗುತ್ತಿದೆ. ಇದೊಂದು ಐತಿಹಾಸಿಕ ದುರಂತವೇ ಸರಿ. ಇದಕ್ಕೆ ಪರಿಹಾರವೆಂದು ಮತದಾರ ಗಂಭೀರವಾಗಿ ವಿಚಾರ ಮಾಡಬೇಕಾದ ಸಂದಿಗ್ಧ ಸಂದರ್ಭ ಇದಾಗಿದೆ. ಮತದಾರ ತಮ್ಮ ಪ್ರಭುತ್ವ ಮೆರೆಯಲಿ" ಎಂದು ಪರಿಹಾರಾತ್ಮಕವಾದ ಮಾತುಗಳನ್ನು ವೀರಯ್ಯನವರು ಹೇಳುತ್ತಾರೆ. ಇಂದು ರಾಜಕೀಯದಲ್ಲಿ ಉಂಟಾಗುತ್ತಿರುವ ಪ್ರತಿಯೊಂದು ಸಮಸ್ಯೆಗಳಿಗೆ ಪರಿಹಾರ ಜನಸಾಮಾನ್ಯರಲ್ಲಿಯೇ ಇದೆ. ಇತಿಹಾಸದ ಪುಟಗಳನ್ನು ಗಮನಿಸಿದಾಗ ಪ್ರಪಂಚದ ಎಲ್ಲಾ ದೇಶಗಳಲ್ಲೂ ಕೂಡ ವ್ಯವಸ್ಥೆಯು ಕೆಟ್ಟು ಹೋದಾಗ ಅಲ್ಲಿಯ ಜನತೆ ಪ್ರಭುತ್ವದ ವಿರುದ್ಧ ತಿರುಗಿ ಬಿದ್ದು ಪ್ರತಿಭಟಿಸುವುದನ್ನು ಕಾಣುತ್ತೇವೆ. ಒಂದು ಹಂತದವರೆಗೂ ಸಹಿಸಿಕೊಳ್ಳುವ ಜನರು, ಸಹಿಸುವಿಕೆ ಮಿತಿಮೀರಿದಾಗ ಅದರ ವಿರುದ್ಧ ಹೋರಾಡಲು ಶುರು ಮಾಡುತ್ತಾರೆ. ಅನೇಕ ದೇಶಗಳಲ್ಲಿ ಕ್ರಾಂತಿಗಳು ಉಂಟಾಗಿ, ಬದಲಾವಣೆಗಳಾಗಿ ಆ ದೇಶಗಳು ಅಭೂತಪೂರ್ವವಾಗಿ ಬೆಳೆದು ನಿಂತಿರುವುದನ್ನು ಇತಿಹಾಸದಲ್ಲಿ ನಾವು ಕಾಣಬಹುದು. ಪ್ರಸ್ತುತ ವರ್ತಮಾನದಲ್ಲಿಯೂ ಕೂಡ ರಾಜಕೀಯ ವ್ಯವಸ್ಥೆ ಕೆಟ್ಟು ಹೋಗಿರುವಂತಹ ಅನೇಕ ದೇಶಗಳಲ್ಲಿ ಜನರು ಈಗಲೂ ದಂಗೆ ಏಳುತ್ತಿದ್ದಾರೆ. ಆಳುವವರ ವಿರುದ್ಧ ಹೋರಾಟಗಳನ್ನು ಮಾಡುತ್ತಿದ್ದಾರೆ. ಆ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅಂತೆಯೇ ನಮ್ಮ ದೇಶದ ರಾಜಕೀಯ ವ್ಯವಸ್ಥೆಯು ಸರಿಯಾಗಬೇಕಾದರೆ ಪ್ರಜೆಗಳ ಯೋಚನೆಯ ರೀತಿಯು ಬದಲಾಗಬೇಕಿದೆ. ಜಾತಿ ಕಾರಣಕ್ಕೆ, ಆಮಿಷಗಳ ಕಾರಣಕ್ಕೆ ಅಥವಾ ಅಜ್ಞಾನದ ಕಾರಣಕ್ಕೆ ಅನರ್ಹರಿಗೆ ಮತ ಚಲಾಯಿಸುವ ಜನರು ಮತ ಹಾಕುವ ಮುನ್ನ ಆಲೋಚಿಸಬೇಕಿದೆ. ಆ ವ್ಯಕ್ತಿಯನ್ನು, ಪಕ್ಷವನ್ನು, ಅವರ ಉದ್ದೇಶಗಳನ್ನು ಅರ್ಥೈಸಿಕೊಂಡು ಆನಂತರ ಮತ ಚಲಾಯಿಸಬೇಕಾದ ಅನಿವಾರ್ಯತೆ ಇದೆ. ಹೀಗೆ ಮಾಡಿದಾಗ ಮಾತ್ರವೇ ಅರ್ಹರು ಆಯ್ಕೆಯಾಗಿ ಬಂದು, ದೇಶ ಮತ್ತು ಸಮಾಜ ಬದಲಾವಣೆಯ ಕಡೆಗೆ ತಿರುಗುತ್ತವೆ ಎಂಬುದನ್ನು ವೀರಯ್ಯನವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ.

ರಾಜಕೀಯದ ಕುರಿತಾಗಿ ತಮ್ಮ ಆಲೋಚನೆಗಳಿಗೆ ಪೂರಕವಾಗಿ ವೀರಯ್ಯನವರು ಕೆಲಸ ಮಾಡಿದರು. ವೀರಯ್ಯನವರು ಪ್ರಚಾರಪ್ರಿಯರಲ್ಲ. ತಾವು ಮಾಡಿದ ಒಳ್ಳೆಯ ಕೆಲಸಗಳನ್ನು ಯಾರಾದರೂ ನೋಡಲಿ, ಹೊಗಳಲಿ ಎಂಬ ಆಸೆಯುಳ್ಳವರಲ್ಲ. ಯಾರು ನೋಡದಿದ್ದರೂ ಅಥವಾ ಗಮನಿಸದಿದ್ದರೂ ತಾವು ಮಾಡಬೇಕಾದ ಕೆಲಸಗಳನ್ನು ಮಾಡುತ್ತಾರೆ. ಆದರೆ ಅಂತಹ ಒಳ್ಳೆಯ

ಯೋಚನೆಗಳನ್ನು, ಕೆಲಸಗಳನ್ನು ಮತ್ತೊಬ್ಬರು ಮಾಡಲಿ ಎಂಬ ಉದ್ದೇಶಕ್ಕೆ ವೀರಯ್ಯನವರು ಅವುಗಳಲ್ಲಿ ಮುಖ್ಯವಾದವುಗಳನ್ನು ತಮ್ಮ ಸಾಹಿತ್ಯದಲ್ಲಿ ದಾಖಲಿಸಿದ್ದಾರೆ. ಅದು ಮುಂದಿನ ಜನಾಂಗಕ್ಕೆ ಮಾದರಿಯಾಗಲಿ ಎಂಬ ಉದ್ದೇಶದಿಂದ ಮಾತ್ರವೇ ಆಗಿದೆ. ತಾವು ಮಾಡಿದ ಹಲವಾರು ಕೆಲಸಗಳಲ್ಲಿ ಪ್ರಮುಖವಾದ ಕೆಲವನ್ನು ಮಾತ್ರ ಸಾರ್ವಜನಿಕವಾಗಿ ವೀರಯ್ಯನವರು ಹಂಚಿಕೊಳ್ಳುವ ಸಮಯದಲ್ಲಿ "ನನ್ನ ಸಾಧನೆಗಳಿಗೆ ಹೊಗಳಿಕೆಯನ್ನು ನಾನು ಬಯಸುವುದಿಲ್ಲ. ನಾನು ಕೈಗೆತ್ತಿಕೊಂಡ ವಿಷಯಗಳು, ಕಂಡುಕೊಂಡ ಪರಿಹಾರಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಬೇಕು. ಯಾರಾದರೂ ಸಿಕ್ಕ ಅಧಿಕಾರದ ಅವಕಾಶವನ್ನು ಸದುಪಯೋಗಿಸಿಕೊಳ್ಳಬೇಕೆಂಬ ಸಂದೇಶವನ್ನು ಈ ಪುಸ್ತಕದ ಮೂಲಕ ರವಾನಿಸಲಾಗಿದೆ. ಒಬ್ಬ ಜನನಾಯಕ ತನ್ನ ಅತ್ಯುತ್ತಮ ವಾಗ್ಮಂಡನೆ ಮೂಲಕ ಎಲ್ಲವನ್ನು ಸಾಧಿಸಬಹುದು. ಯುವ ಪೀಳಿಗೆಗೆ ಇದು ಒಂದು ಮಾರ್ಗದರ್ಶಿಯಾಗಲಿ ಎಂಬ ಉದ್ದೇಶ ನನ್ನದು" ಎಂಬುದಾಗಿ ತಮ್ಮ ಕೆಲಸಗಳ ಬಗ್ಗೆ ವೀರಯ್ಯನವರು ದಾಖಲಿಸುತ್ತಾರೆ.

**ಆಕರ ಗ್ರಂಥಗಳು:**


1. ರಾಜೇಶ್ವರಿ ಎಸ್. (ಸಂ.), (2022), ವಿಧಾನಪರಿಷತ್ತಿನಲ್ಲಿ ಡಿ.ಎಸ್. ವೀರಯ್ಯ, ಬೆಂಗಳೂರು: ಪಿತಾಮಹ ಪ್ರಕಾಶನ.
2. ವೀರಯ್ಯ ಡಿ.ಎಸ್., (2021), ಸಮಾಜಮುಖಿ – ಸಂಪುಟ–2, ಬೆಂಗಳೂರು: ಪಿತಾಮಹ ಪ್ರಕಾಶನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.